ಈ) ಮಳೆಗೆಯಿಂದ : ರೂ.57,24,739/-

ಪ್ರವೇಶ ಶುಲ್ಕದಿಂದ -

(ರೂ.ಲಕ್ಷಗಳಲ್ಲಿ)

ವರ್ಷ -Year	ಮೊತ್ತ (ರೂ.)
2000	50.00
2001	ಗ್ಲೋಬಲ್ ಟೆಂಡರ್
2002	34.46

ಉ) (ರೂ.ಲಕ್ಷಗಳಲ್ಲಿ -)

ವರ್ಷ	ಖಾಯಂ (ಅಭಿವೃದ್ಧಿ) ಕಾಮಗಾರಿಗಳು	
	ಸಿವಿಲ್	ಎಲೆಕ್ಟ್ರಿಕಲ್
2000-01	131.17	- - -
2001-02	- - -	5.00
2002-03	14.33	- - -

ಮಂಡ್ಯ ಮತ್ತು ಮದ್ದೂರಿನಲ್ಲಿ ಕೊಳಚೆ ಪ್ರದೇಶಗಳ ಅಭಿವೃದ್ಧಿ

1028 (1257) ಶ್ರೀ ಎ.ರಾಮದಾಸ್ (ಕೃಷ್ಣರಾಜ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ಮತ್ತು ಮದ್ದೂರಿನಲ್ಲಿ ಕೊಳಚೆ ಪ್ರದೇಶಗಳ ಅಭಿವೃದ್ಧಿಗೆ ಯೋಜನೆ ಸಿದ್ಧಪಡಿಸಲಾಗಿದೆಯೇ ಯೋಜನೆ ಮೊತ್ತ ಎಷ್ಟು;

ಆ) ಯೋಜನೆಗಾಗಿ ಎಂದು ಟೆಂಡರ್ ಕರೆಯಲಾಗಿತ್ತು; ಎಷ್ಟು ಜನ ಟೆಂಡರ್ ಅರ್ಜಿಗಳನ್ನು ಪಡೆದಿದ್ದರು; ಟೆಂಡರ್‌ನಲ್ಲಿ ಎಷ್ಟು ಜನ ಅರ್ಜಿಸಲ್ಲಿಸಿದ್ದರು;

ಇ) ಟೆಂಡರ್ ನಲ್ಲಿ ಭಾಗವಹಿಸುವವರಿಗೆ ಕೆಲವರು ಬೆದರಿಕೆ ಒಡ್ಡಿದ ಮತ್ತು ನಂತರ ಈ ಕುರಿತು ನ್ಯಾಯಾಲಯದ ಮೋರೆ ಹೋದ ಘಟನೆ ನಡೆದಿರುವುದು ನಿಜವೇ; ಕೋರ್ಟಿಗೆ ಹೋದವರು ಯಾರು; ಬೆದರಿಕೆ ಒಡ್ಡಿದವರು ಯಾರು?

ಈ) ನ್ಯಾಯಾಲಯ ಈ ವಿಚಾರದಲ್ಲಿ ನೀಡಿರುವ ತೀರ್ಪು ಏನು ; ನ್ಯಾಯಾಲಯದ ತೀರ್ಪಿನ ನಂತರ ಸರ್ಕಾರ ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು?

ಉ) ಅಂತಿಮವಾಗಿ ಟೆಂಡರ್ ನಲ್ಲಿ ಎಷ್ಟು ಜನ ಭಾಗವಹಿಸಲು ಅವಕಾಶ ನೀಡಲಾಯಿತು; ಈ ಕಾಮಗಾರಿಯನ್ನು ಯಾರಿಗೆ ಎಷ್ಟು ಮೊತ್ತಕ್ಕೆ ನೀಡಲಾಯಿತು?

ಶ್ರೀ ಸಿ.ಆರ್. ಸಗೀರ್ ಅಹಮದ್ (ವಸತಿ ಸಚಿವರು) :

ಅ) ಮಂಡ್ಯ ಮದ್ದೂರು ಪಟ್ಟಣಗಳ ಕೊಳಚೆ ಪ್ರದೇಶಗಳ ಅಭಿವೃದ್ಧಿಗೆ ಕೆ.ಯು.ಐ.ಡಿ.ಎಫ್.ಸಿ ಮುಖಾಂತರ ಎಷಿಯನ್ ಅಭಿವೃದ್ಧಿ ಬ್ಯಾಂಕ್ ನೆರವಿನೊಂದಿಗೆ ರೂ.222.00 ಲಕ್ಷಗಳ ಯೋಜನೆಯನ್ನು ಸಿದ್ಧಪಡಿಸಲಾಗಿದೆ.

ಆ) ಯೋಜನೆಗೆ ಟೆಂಡರ್‌ನ್ನು ದಿನಾಂಕ:23-8-2002 ರಂದು ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಯಿಂದ ಕರೆಯಲಾಯಿತು. ಒಟ್ಟು 55 ಜನ ಟೆಂಡರ್ ಡಾಕ್ಯುಮೆಂಟ್ಸ್ ಪಡೆದಿದ್ದು, ಈ ಪೈಕಿ 5 ಜನ ಮಾತ್ರ ಟೆಂಡರ್‌ನ್ನು ಸಲ್ಲಿಸಿರುತ್ತಾರೆ.

ಇ) ಟೆಂಡರ್‌ನಲ್ಲಿ ಭಾಗವಹಿಸಲು ಕೆಲವರು ಬೆದರಿಕೆ ಒಡ್ಡಿರುವ ಬಗ್ಗೆ ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಗೆ ಯಾವುದೇ ಮಾಹಿತಿಯಿರುವುದಿಲ್ಲ. ಆದರೂ ಟೆಂಡರ್‌ನ್ನು ನಿಗಧಿತ ವೇಳೆಯಲ್ಲಿ ಸಲ್ಲಿಸಲು ಕೆಲವರು ಅಡ್ಡಿಪಡಿಸಿದ್ದಾರೆಂದು, ಸಲ್ಲಿಸಲು ಸಾಧ್ಯವಾಗದೇ ಇತ್ತೆಂದು ಒಬ್ಬ ಗುತ್ತಿಗೆದಾರರು ಕರ್ನಾಟಕ ಉಚ್ಚನ್ಯಾಯಾಲಯದಲ್ಲಿ ಮೊರೆ ಹೋಗಿ ಇವರ ಟೆಂಡರ್‌ನ್ನು ಸ್ವೀಕರಿಸಲು ರಿಟ್ ಅರ್ಜಿಯಲ್ಲಿ ಮಾನ್ಯ ಉಚ್ಚನ್ಯಾಯಾಲಯವು ಆದೇಶಿಸಿದೆ.

ಈ) ಮಾನ್ಯ ಉಚ್ಚನ್ಯಾಯಾಲಯವು WP ಸಂಖ್ಯೆ: 38676/2002 ತನ್ನ ಮಧ್ಯಂತರ ಆದೇಶ ದಿನಾಂಕ:28-10-2002 ರಲ್ಲಿ ಶ್ರೀ ಸೀತರಾಮೇಗೌಡ ರವರ ಮೊಹರಾದ ಟೆಂಡರ್‌ನ್ನು ದಿನಾಂಕ:2-11-2002 ರಂದು ಬೆಳಿಗ್ಗೆ 11.00 ರಿಂದ 12.00 ಗಂಟೆಯವರೆಗೆ ಸ್ವೀಕರಿಸಲು ತೀರ್ಪು ನೀಡಿರುತ್ತದೆ. ನ್ಯಾಯಾಲಯದ ತೀರ್ಪಿನ ನಂತರ ಶ್ರೀ ಸೀತರಾಮೇಗೌಡ ಇವರ ಮೊಹರಾದ ಟೆಂಡರ್‌ನ್ನು ದಿನಾಂಕ:2-11-2002 ರಂದು 11.30 ಗಂಟೆಗೆ KUIDFC ಯಿಂದ ನೇಮಕಗೊಂಡಿದ್ದ ಸಮಾಲೋಚಕರಾದ ಮೆ: ದಲ್ಲಾಲ್ ಕನ್ಸಲ್ಟೆಂಟ್ಸ್ ಮತ್ತು ಇತರೆ ಅಧಿಕಾರಿಗಳ ಸಮಕ್ಷಮದಲ್ಲಿ ಟೆಂಡರ್‌ನ್ನು ಸ್ವೀಕರಿಸಲಾಯಿತು. ಇವರ ಬಿಡ್ ವಾಲ್ಯೂಂ-1 ತೆರೆದು ಅಂತಿಮವಾಗಿ ಮೆ: ದಲ್ಲಾಲ್ ಕನ್ಸಲ್ಟೆಂಟ್ಸ್‌ರವರು ಬಿಡ್ ವಾಲ್ಯೂಂ-1 ಅನ್ನು ವಿಶ್ಲೇಷಣೆ ಮಾಡಿ ಒಟ್ಟು 5 ಬಿಡ್ಡರುಗಳ ಪೈಕಿ ಇಬ್ಬರು ಮಾತ್ರ ಬಿಡ್ ವಾಲ್ಯೂಂ-2 ತೆರೆಯಲು ಅರ್ಹರಾಗಿತ್ತಾರೆಂದು ವರದಿ ನೀಡಿದ್ದು, ನಂತರ KUIDFC ಯಿಂದ ಎ.ಡಿ.ಬಿ. ಅನುಮೋದನೆ ಪಡೆದು ದಿನಾಂಕ:13-2-2002 ಬೆಳಿಗ್ಗೆ 11.30 ಗಂಟೆಗೆ ಇಬ್ಬರು ಬಿಡ್ ವಾಲ್ಯೂಂ-2 ಅನ್ನು ಮೆ: ದಲ್ಲಾಲ್ ಕನ್ಸಲ್ಟೆಂಟ್ಸ್ ಕಾರ್ಯನಿರ್ವಹಕ ಇಂಜನಿಯರ್ ಕೆ.ಯು.ಐ.ಡಿ.ಎಫ್ ಸಿ ಹಾಗೂ ಬಿಡ್ಡರ್ಸ್ ಗಳ ಸಮಕ್ಷಮದಲ್ಲಿ ತೆರೆದಿರುತ್ತಾರೆ. ನಂತರ ಮೆ: ದಲ್ಲಾಲ್ ಕನ್ಸಲ್ಟೆಂಟ್ಸ್ ರವರು ಬಿಡ್ ವಾಲ್ಯೂಂ-2 ಗಳನ್ನು ವಿಶ್ಲೇಷಣೆ ಮಾಡಿ ಕಂಟ್ರಾಕ್ಟರ್ ಶ್ರೀ ಜಿ. ಚಂದ್ರೇಗೌಡ ರವರ ಬಿಡ್‌ನ್ನು ಮೊದಲನೇ ಕಡಿಮೆ (ಶೇ.27.28 ರಷ್ಟು 2002-2003 ನೇ ಸಾಲಿನ ದರಪಟ್ಟಿಯ ಮೇಲೆ ಹೆಚ್ಚುವರಿ) ಎಂದು ತಿಳಿಸಿದ್ದು ಇದನ್ನು ಕೆ.ಯು.ಐ.ಡಿ.ಎಫ್.ಸಿ. ಗೆ ತಿಳಿಸಲಾಗಿರುತ್ತದೆ. ದಿನಾಂಕ:22-2-2003 ರಂದು ಕೆ.ಯು.ಐ.ಡಿ.ಎಫ್.ಸಿ. ಕಚೇರಿಯಲ್ಲಿ ಟೆಂಡರ್ ಅನುಮೋದನೆ ಸಮಿತಿ ಸಭೆಯಲ್ಲಿ ಶ್ರೀ ಜಿ. ಚಂದ್ರೇಗೌಡ ಇವರ ಕಡಿಮೆ ಬಿಡ್ ಅನ್ನು ದ್ವಿಪಕ್ಷೀಯ ಮಾತುಕತೆಗೆ ಒಳಪಡಿಸಲು ತೀರ್ಮಾನಿಸಲಾಗಿರುತ್ತದೆ. ಟೆಂಡರ್ ಅನುಮೋದನೆ ಸಮಿತಿ ಸಭೆಯ ನಡವಳಿಗಳನ್ನು ಕೆ.ಯು.ಐ.ಡಿ.ಎಫ್.ಸಿ. ಯಿಂದ ನಿರೀಕ್ಷಿಸಲಾಗಿದೆ. ಆದು ಬಂದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಉ) ಅಂತಿಮವಾಗಿ ಟೆಂಡರ್‌ನಲ್ಲಿ 5 ಜನ ಭಾಗವಹಿಸಿರುತ್ತಾರೆ. ಈ ಕಾಮಗಾರಿಯನ್ನು ಇನ್ನು ಯಾರಿಗೂ ವಹಿಸಿರುವುದಿಲ್ಲ. ಹಿಂದಿನ ಕಂಡಿಕೆಯಲ್ಲಿ ತಿಳಿಸಿರುವಂತೆ ಕ್ರಮ ವಹಿಸಲಾಗುವುದು.

ಗುಲ್ಬರ್ಗಾ ಜಿಲ್ಲೆಯಲ್ಲಿ ವಿಶ್ವಬ್ಯಾಂಕ್ ನೆರವಿನ ಕುಡಿಯುವ ನೀರಿನ ಯೋಜನೆ

1030 (1262) ಶ್ರೀ ರೇವು ನಾಯಕ್ ಬೆಳಮಗಿ (ಕಮಲಾಪೂರ್): ಮಾನ್ಯ ಗ್ರಾಮೀಣ ನೀರು ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯಲ್ಲಿ ವಿಶ್ವಬ್ಯಾಂಕ್ ನರವಿನಲ್ಲಿ ಕುಡಿಯುವ ನೀರಿನ ಯೋಜನೆಗಳನ್ನು ಕೈಗೆತ್ತಿಕೊಂಡಿರುವುದು ನಿಜವೇ;

ಆ) ಎಷ್ಟು ವಿಧಾನಸಭಾ ಕ್ಷೇತ್ರದಲ್ಲಿ ಯಾವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ; (ವಿವರವನ್ನು ಅಂದಾಜು ವೆಚ್ಚದೊಂದಿಗೆ ನೀಡುವುದು);

ಇ) ಇವುಗಳಲ್ಲಿ ಎಷ್ಟು ಕಾಮಗಾರಿಗಳು ಪೂರ್ಣಗೊಂಡಿವೆ.

ಈ) ಈ ಕಾಮಗಾರಿಗಳಲ್ಲಿ ಕೆಲವು ಕಳಪೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣ ನೀರು ಸರಬರಾಜು ರಾಜ್ಯ ಸಚಿವರು) :

ಅ) ಹೌದು.

ಆ) ವಿಶ್ವಬ್ಯಾಂಕ್ ನೆರವಿನ ಕರ್ನಾಟಕ ಸಮಗ್ರ ಗ್ರಾಮೀಣ ನೀರು ಸರಬರಾಜು ಮತ್ತು ಪರಿಸರ ನೈರ್ಮಲ್ಯ-1 ಯೋಜನೆಡಿ 100 ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಅವುಗಳು ಈ ಕೆಳಗಿನಂತಿವೆ.

1)	ಪ್ರಾಯೋಗಿಕ ಹಾಗೂ ಹಂತ-1	-	28
2)	ಹಂತ-2	-	72
	ಒಟ್ಟು	-	**100**

ವಿಶ್ವಬ್ಯಾಂಕ್ ನೆರವಿನ ಯೋಜನೆ-1 ರ ಅಡಿ 13 ವಿಧಾನ ಸಭಾ ಕ್ಷೇತ್ರಗಳಲ್ಲಿ ಯೋಜನೆಯನ್ನು ಈ ಕೆಳಗಿನಂತೆ ಕೈಗೆತ್ತಿಕೊಳ್ಳಲಾಗಿದೆ.

1)	ಅಫ್ಜಲ್‌ಪುರ್	-	8
2)	ಅಳಂದ್	-	11
3)	ಕಮಲಾಪುರ	-	5
4)	ಚಿಂಚೋಳಿ	-	12
5)	ಚಿತ್ತಾಪುರ್	-	9
6)	ಶಹಬಾದ್	-	8
7)	ಗುಲ್ಬರ್ಗಾ	-	6
8)	ಜೇವರ್ಗಿ	-	14
9)	ಶಹಾಪೂರ್	-	5
10)	ಯಾದ್‌ಗಿರ್	-	3
11)	ಗುರುಮುಟಕಲ್	-	7